

## ಹೈಗನ ಅಣಬೆ

ಮಳೆಗಾಲದ ಆರಂಭದಲ್ಲಿ ಮಲೆನಾಡಿನ ಕಾಡಿನಲ್ಲಿ ಸಿಗುವ ನೂರಾರು ಜಾತಿಯ ಅಣಬೆಗಳಲ್ಲಿ ಈ 'ಹೈಗನ ಅಣಬೆ' ಸಹ ಒಂದು. 'ಹೈಗ' ಎನ್ನುವ ಪ್ರಭೇದದ ಮರ ಮಲೆನಾಡಿನ ಕಾಡಿನಲ್ಲಿ ಸಾಕಷ್ಟು ಇರುತ್ತದೆ. ಈ ಮರದ ಎಲೆಗಳು ಬೇಸಿಗೆಯಲ್ಲಿ ಉದುರಿ ಮಳೆ ಬಂದಾಗ ಕೊಳೆಯುತ್ತವೆ. ಈ ಜಾಗದಲ್ಲಿ ಹುಟ್ಟುವ ಅಣಬೆಗಳಿವು. ಹಾಗಾಗಿ 'ಹೈಗನ ಅಣಬೆ' ಎನ್ನುವ ಹೆಸರಿದೆ. ಇವು ಕೆಂಪು ಬಣ್ಣದಲ್ಲಿ ಮತ್ತು ಕಂದು ಬಣ್ಣದಲ್ಲಿ ಸಹ ಇರುತ್ತವೆ. ಮಲೆನಾಡಿಗರಿಗೆ ಅತ್ಯಂತ ಪ್ರಿಯವಾದ ಈ ಅಣಬೆಯ ಖಾದ್ಯಗಳು ಬಹಳ ರುಚಿಯಾಗಿಯೂ ಮತ್ತು ಆರೋಗ್ಯಕರವಾಗಿಯೂ ಇರುತ್ತವೆ. ಈ ಅಣಬೆಯನ್ನು ಕಾಡಿನಿಂದ ಆರಿಸಿ ತರವಾಗಲು ಬಹಳ ಜಾಗರೂಕರಾಗಿರಬೇಕು. ಯಾಕೆಂದರೆ ಕೆಂಪು ಬಣ್ಣದಲ್ಲೇ ವಿಷಕಾರಿ ಅಣಬೆಗಳು ಕೂಡ ಕಾಡಿನಲ್ಲಿ ಸಾಕಷ್ಟು ಇರುತ್ತವೆ. ಇದರ ಮೇಲಿನ ಕೆಂಪು ಬಣ್ಣದ ಪದರವನ್ನು ತೆಗೆದು ಖಾದ್ಯಕ್ಕೆ ಬಳಸಬೇಕು, ಅಧಿಕ ಪೋಷಕಾಂಶಗಳನ್ನು ಹೊಂದಿರುವ ಹಾಗೂ ನೈಸರ್ಗಿಕವಾಗಿ ಸಿಗುವಂತಹ ಈ 'ಹೈಗನ ಅಣಬೆ'ಯನ್ನು ಮಲೆನಾಡಿಗರು ಖಂಡಿತ ವರ್ಷಕ್ಕೊಮ್ಮೆ ಹುಡುಕಿ ತರುತ್ತಾರೆ.

–ಜಯಂತಿ ರಾಘವೇಂದ್ರ, ಆಗುಂಬೆ



## ದೇವದೂತರ ತುತ್ತೂರಿ ಹೂವು

ಕೆಲವು ವರ್ಷಗಳ ಹಿಂದೆ ಮಡಿಕೇರಿಯ ರಾಜಾಸೀಟ್ ಉದ್ಯಾನವನ್ನು ಸಂದರ್ಶಿಸಿದ್ದಾಗ ತಿಳಿ ಗುಲಾಬಿ ಬಣ್ಣದೊಂದಿಗೆ ಯಥೇಚ್ಛವಾಗಿ ಅರಳಿರುವ ಈ ಹೂವುಗಳು ಗಮನಸೆಳೆದಿದ್ದವು. ಇತ್ತೀಚೆಗೆ ದುಬಾರೆಗೆ ಹೋದಾಗಲೂ ರಸ್ತೆ ಬದಿಯಲ್ಲಿ ಕಂಡುಬಂದು ಕುತೂಹಲ ಕೆರಳಿಸಿದವು. ಮಲೆನಾಡುಗಳಲ್ಲಿ ಕಾಣಸಿಗುವ ಈ ಆಕರ್ಷಕ ಸುಮಗಳಿಗೆ 'ಏಂಜಲ್ಸ್ ಟ್ರಂಪೆಟ್' (ಕನ್ನಡದಲ್ಲಿ 'ದೇವದೂತರ ತುತ್ತೂರಿ ಹೂವು') ಎಂಬ ಹೆಸರಿದೆ. ವೈಜ್ಞಾನಿಕವಾಗಿ 'ಬ್ರಗ್‌ಮ್ಯಾನ್ಸಿಯಾ ಸುವೇಲೆನ್ಸ್' ಎಂದು ಕರೆಯಲಾಗುತ್ತದೆ. ಇದರ ಸಸ್ಯವು ತೂಗಾಡುವ, ತುತ್ತೂರಿಯಾಕಾರದ ದೊಡ್ಡ ಪುಷ್ಪಗಳಿಗೆ ಹೆಸರುವಾಸಿಯಾಗಿದೆ. 6 ರಿಂದ 10 ಇಂಚುಗಳಷ್ಟು ಉದ್ದ ಬೆಳೆಯಬಲ್ಲ ಹೂವುಗಳು ವಿಶೇಷವಾಗಿ ಸಂಜೆಯ ಹೊತ್ತಲ್ಲಿ ಪರಿಮಳಯುಕ್ತವಾಗಿರುತ್ತವೆಯೆಂಬ ಮಾಹಿತಿಯಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಬಾನಾಡಿಗಳ ತಂಗುದಾಣ

ಪಡುವಣ ದಿಕ್ಕಿನಾಗಸದಲ್ಲಿ ರಂಗಿನೋಕುಳಿಯ ಸಂಭ್ರಮದಲ್ಲಿದ್ದ ರವಿ ದಿನದಾಟಕ್ಕೆ ತೆರೆ ಎಳೆದು ಪೆವಿಲಿಯನ್ ಸೇರಲು ಅಣಿಯಾಗುತ್ತಿದ್ದ. ಭೂಮಂಡಲದ ಬಹುತೇಕ ಜೀವಿಗಳು ಕತ್ತಲಾವರಿಸುತ್ತಲೇ ಬೆಚ್ಚನೆಯ ತಾವು ಹುಡುಕಿ ತಳವೂರುತ್ತಿದ್ದರೆ. ಇಲ್ಲೊಂದಿಷ್ಟು ಹಕ್ಕಿಗಳು ಮಾತ್ರ ಈ ಬೆತ್ತಲೆಮರವನ್ನು ಆಶ್ರಯಿಸಿಕೊಂಡಿರುವುದು ಕಂಡು ತುಸು ಅಚ್ಚರಿಯಾಯಿತು. ಹೊರಜಗತ್ತಿಗೆ ಎಲೆಗಳುದುರಿ ಕಾಂಡವೆಲ್ಲಾ ಒಣಗಿರುವ ಈ ಮರ, ನಿಂತ ಶವದಂತೆ ಕಾಣಬಹುದು ಆದರೆ ಈ ಹಕ್ಕಿಗಳು ಈ ಒಣಮರವನ್ನೇ ರಾತ್ರಿ ಕಳೆಯಲು ಆಶ್ರಯಿಸುವುದರ ಹಿಂದೆ ಅವುಗಳ ಬುದ್ಧಿವಂತಿಕೆ ಇದೆ. ಯಾವುದೇ ಹಕ್ಕಿಗಳು ರಾತ್ರಿ ಮಲಗಲೋ ಇಲ್ಲಾ ಹಗಲು ತುಸು ಹೊತ್ತು ತಂಗಲೋ ಗೂಡುಗಳನ್ನು ಕಟ್ಟಿಕೊಳ್ಳುವುದಿಲ್ಲ. ಮೊಟ್ಟೆಗಳನ್ನಿಟ್ಟು ಮರಿಮಾಡಲು ಮಾತ್ರ ಗೂಡಿಡುವ ಪರಿಪಾಟ ಅವುಗಳದ್ದು. ರಾತ್ರಿ ಮಲಗಲು ಹಕ್ಕಿಗಳು ಗಿಡಮರಗಳನ್ನವಲಂಬಿಸುವುದು ಅನಿವಾರ್ಯ. ಹೀಗೆ ಆಯ್ದುಕೊಂಡ ಮರ ಶತ್ರುಜೀವಿಗಳಾದ ಹಾವು, ಮುಂಗುಸಿ, ಬೆಕ್ಕು ಮುಂತಾದವುಗಳಿಂದ ಮುಕ್ತವಾಗಿರಬೇಕೆಂಬ ಎಚ್ಚರಿಕೆ ಅವುಗಳಿಗೆ ಜನ್ಮತಃ ಸಿದ್ಧಿಸಿರುತ್ತದೆ. ಜಾಗ ಸುರಕ್ಷಿತವಾಗಿಲ್ಲದಿದ್ದರೆ ಗಾಢನಿದ್ರೆಯಿಂದ ಚಿರನಿದ್ರೆಗೆ ಜಾರಬೇಕಾಗಬಹುದೆಂಬ ಅರಿವೂ ಅವುಗಳಿಗಿದೆ. ಎಲೆಗಳಿರದ ಈ ಮರವು ಶತ್ರುಜೀವಿಗಳು ಮರೆಯಿಂದ ದಾಳಿಮಾಡುವ ಅಥವಾ ನಿಶ್ಶಬ್ದವಾಗಿ ಎರಗುವ ಅವಕಾಶವನ್ನು ನೀಡುವುದಿಲ್ಲ. ಸಮೂಹದಲ್ಲಿರುವುದರಿಂದ ಸದಾ ಜಾಗೃತರಾಗಿರಬೇಕಾದ ಅನಿವಾರ್ಯತೆಯೂ ಇಲ್ಲ. ಆದ್ದರಿಂದಲೇ ಈ ಹಕ್ಕಿಗಳು ಒಣಮರವನ್ನು ಆಶ್ರಯಿಸಿರುವುದು. ಮರದ ತುದಿಯಲ್ಲಿ ಹೀಗೆ ತನ್ನ ಕುಲಬಾಂಧವರೊಡನೆ ಗುಂಪಾಗಿ ಕೂತು ತಂಗಾಳಿಗೆ ದಣಿವಾರಿಸಿಕೊಳ್ಳುತ್ತಾ ಆಗಸದ ರಂಗಿನೋಕುಳಿಯ ಸವಿಯನು ಸವಿಯುತಾ ಗಾಳಿಗೆ ತೂಗುವ ಮರದ ಜೋಗುಳಕೆ ನಿದ್ರೆಗೆ ಜಾರುವ ಈ ರೆಕ್ಕೆಮಿತ್ರರ ಅಭಿರುಚಿಯನ್ನು ಕಂಡಾಗ ಸ್ವರ್ಗಕ್ಕೆ ಕಿಚ್ಚುಹಚ್ಚುವುದೆಂದರೆ ಇದೇ ಇರಬೇಕು ಎನ್ನಿಸಿತು.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

